ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 5, MAR-APR 2022, Pp 114-118**

IIMRD JOURNALS

**www.iimrd.com**

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2005: ಒಂದು ವಿಶ್ಲೇಷಣೆ

**ಶಿವಕುಮಾರ್ ಜೆ***

*ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಸಾರಾಂಶ: (Abstract)**

*ಸ್ವಾತಂತ್ರ ನಂತರದಲ್ಲಿ ಭಾರತ ಸರ್ಕಾರವು ಗ್ರಾಮೀಣಾಭಿವೃದ್ಧಿಗೆ ದೂರದೃಷ್ಟಿ ಹೊಂದಿರುವಂತಹ ಯೋಜನೆಗಳಲ್ಲಿ ಪ್ರಮುಖವಾದುದು 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ–2005. ಈ ಯೋಜನೆ ಸ್ವತಂತ್ರ ನಂತರದ ಬೃಹತ್ ಮೊತ್ತದ ಯೋಜನೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅಂದಿನ ಯುಪಿಎ ಸರ್ಕಾರ ಅಕ್ಟೋಬರ್ 2, 2009 ರಂದು 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' ಎಂದು ನಾಮಕರಣ ಮಾಡಲಾಯಿತು.*

**ಮುಖ್ಯಪದಗಳು (Keywords):** ಮಹಾತ್ಮ ಗಾಂಧಿ, MGNREGA, ಯುಪಿಎ, ಉದ್ಯೋಗ ಖಾತರಿ, ಕನಿಷ್ಠ ಕೂಲಿ.

## ಪೀಠಿಕೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ –2005 ಕಾರ್ಯಕ್ರಮಗಳ ಅಡಿಯಲ್ಲಿ "ದುಡಿಯುವ ಕೈಗಳಿಗೆ ಉದ್ಯೋಗ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಸ್ತುತ ದಿನಗಳಲ್ಲಿಯೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಪಂಚದಲ್ಲಿಯೇ ಒಂದು ದೊಡ್ಡ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ –2005 ಯೋಜನೆಯ ಪ್ರಮುಖ ಲಕ್ಷಣಗಳೆಂದರೆ ಪ್ರತಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ವಾಸಿಸುವ ಪ್ರತಿ ಕುಟುಂಬದ ಒಬ್ಬ ವ್ಯಕ್ತಿಗೆ ಅಂದರೆ 18 ವರ್ಷ ಮೇಲ್ಪಟ್ಟ ಆರೋಗ್ಯವಂತ ವ್ಯಕ್ತಿಯು ಉದ್ಯೋಗ ಪಡೆಯಲು ಅರ್ಜಿಸಲ್ಲಿಸ ಬಹುದಾಗಿದ್ದು, ಅರ್ಜಿ ಸಲ್ಲಿಸಿದ ವ್ಯಕ್ತಿಗೆ 15 ದಿನಗಳ ಒಳಗಾಗಿ ಉದ್ಯೋಗವನ್ನು ನೀಡಬೇಕು, ಇಲ್ಲವಾದಲ್ಲಿ ನಿರುದ್ಯೋಗ ಭತ್ಯೆಯನ್ನು ನೀಡಬೇಕಾಗುತ್ತದೆ. ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಪಂಚಾಯಿತಿಗಳು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗವನ್ನು ದೊರಕಿಸಿಕೊಡುವುದು ಈ ಯೋಜನೆಯ ಮುಖ್ಯ ದ್ಯೇಯವಾಗಿದೆ.

ಉದ್ಯೋಗ ಪಡೆದ ವ್ಯಕ್ತಿಗೆ ವಾರಕ್ಕೊಮ್ಮೆ ಆಥವಾ 15 ದಿನಗಳ ಒಳಗೆ ಕೂಲಿ ಹಣವನ್ನು ಆತನ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು, ಕೆಲಸ ಮಾಡುವ ಸ್ಥಳವು ಸ್ವಂತ ಸ್ಥಳದಿಂದ 5 ಕಿಲೋ ಮೀಟರ್ ವ್ಯಾಪ್ತಿಯ ಒಳಗಿರಬೇಕು. ಇಲ್ಲವಾದರೆ ಕೂಲಿ ಕಾರ್ಮಿಕನಿಗೆ ಶೇ. 10 ರಷ್ಟು ಹೆಚ್ಚುವರಿಯಾಗಿ ಸಾರಿಗೆ

*Please cite this article as:* *ಶಿವಕುಮಾರ್ ಜೆ* (2022). ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2005: ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ.* 114–118

ಭತ್ಯೆಯನ್ನು ನೀಡಬೇಕು, ಕೆಲಸದ ಸಮಯದಲ್ಲಿ ಕೂಲಿ ಕಾರ್ಮಿಕರಿಗೆ ವಿಶ್ರಾಂತಿಗಾಗಿ ನೆರಳಿನ ವ್ಯವಸ್ಥೆ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಶಿಶುಪಾಲನೆ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಸೌಕಾರ್ಯಗಳನ್ನು ಒದಗಿಸಬೇಕು, ಅಂಗವಿಕಲರು, ವಯೋವೃದ್ಧರಿಗೆ ಕೆಲವು ರಿಯಾಯತಿಗಳನ್ನು ಕಲ್ಪಿಸಿಕೊಡಬೇಕು, ಅವರಿಗೆ 5 ಕಿಲೊ ಮೀಟರ್ ದೂರದ ಕೆಲಸ ನೀಡಿದರೆ ಕೂಲಿ ಹಣದಲ್ಲಿ ಹೆಚ್ಚುವರಿಯಾಗಿ ಶೇಕಡ 20 ರಷ್ಟು ಹಣವನ್ನು ಪಡೆಯಲು ಅವಕಾಶವಿರುತ್ತದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಲಿಂಗತಾರತಮ್ಯ ಮಾಡುವಂತಿಲ್ಲ, ಸಮಾನ ಕೂಲಿ ನೀಡಬೇಕಾಗಿರುತ್ತದೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಆಯಾ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಜವಾಬ್ದಾರಿಯಾಗಿರುತ್ತರೆ.

**ರಾಜ್ಯವಾರು ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಕೂಲಿಯದರಗಳು**

| ರಾಜ್ಯಗಳು | ಕೂಲಿದರ–2021–22 | ಕೂಲಿದರ 2020–21 | ಹೆಚ್ಚುವರಿ ನರೇಗ ಕೂಲಿ |
|---|---|---|---|
| ಆಂಧ್ರ ಪ್ರದೇಶ | 245 | 237 | 8(3.4) |
| ಅರುಣಚಲ ಪ್ರದೇಶ | 212 | 205 | 7(3.4) |
| ಅಸ್ಸಾಂ | 224 | 213 | 11(5.2) |
| ಬಿಹಾರ | 198 | 194 | 4(2.1) |
| ಛತೀಷ್‌ಘಡ್ | 193 | 190 | 3(1.6) |
| ಗೋವ | 294 | 280 | 14(5.0) |
| ಗುಜರಾತ್ | 229 | 224 | 5(2.2) |
| ಹರಿಯಾಣ | 315 | 309 | 6(1.9) |
| ಹಿಮಾಚಲ ಪ್ರದೇಶ | 254 | 248 | 6(2.4) |
| ಜಮ್ಮುಮತ್ತುಕಾಶ್ಮೀರ | 214 | 204 | 10(4.9) |
| ಲಡಾಕ್ | 214 | 204 | 10(4.9) |
| ಜಾರ್ಖಂಡ್ | 198 | 194 | 4(2.1) |
| ಕರ್ನಾಟಕ | 289 | 275 | 14(5.1) |
| ಕೇರಳ | 291 | 291 | 0(0) |
| ಮಧ್ಯಪ್ರದೇಶ | 193 | 190 | 3(1.6) |
| ಮಹಾರಾಷ್ಟ್ರ | 248 | 238 | 10(4.2) |
| ಮಣಿಪುರ | 251 | 238 | 13(5.5) |
| ಮೇಘಾಲಯ | 226 | 203 | 23(11.3) |
| ಮೀಜೋರಂ | 233 | 225 | 8(3.6) |
| ನಾಗಾಲ್ಯಾಂಡ್ | 212 | 205 | 7(3.4) |

| | | | |
|---|---|---|---|
| ಒಡಿಶಾ | 215 | 207 | 8(3.9) |
| ಪಂಜಾಬ್ | 269 | 263 | 6(2.3) |
| ರಾಜಾಸ್ಥಾನ | 221 | 220 | 1(0.5) |
| ಸಿಕ್ಕಿಂ | 212 | 205 | 7(3.4) |
| ತಮಿಳುನಾಡು | 273 | 256 | 17(6.6) |
| ತೆಲಂಗಾಣ | 245 | 237 | 8(3.4) |
| ತ್ರಿಪುರ | 212 | 205 | 7(3.4) |
| ಉತ್ತರಪ್ರದೇಶ | 204 | 201 | 3(1.5) |
| ಉತ್ತರಖಂಡ್ | 204 | 201 | 3(1.5) |
| ಪಶ್ಚಿಮ ಬಂಗಾಳ | 213 | 204 | 9(4.4) |

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪ್ರಮುಖ ಗುರಿ ಮತ್ತು ಉದ್ದೇಶಗಳು**

ಭಾರತ ದೇಶ ಒಂದು ಕೃಷಿ ಆಧಾರಿತ ದೇಶವಾಗಿದ್ದು ಇಲ್ಲಿ ಮಳೆಯ ಅನಿಶ್ಚಿತತೆಯಿಂದ ಕೂಡಿದ್ದು ವ್ಯವಸಾಯವು ಕೂಡ ಹಿಂದೂಳಿದಿದೆ, ಇಂತಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ಜನರು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ನಗರ ಪ್ರದೇಶಗಳಿಗೆ ಉದ್ಯೋಗವನ್ನು ಬಯಸಿ ವಲಸೆ ಹೋಗುವುದು ಸಾಮಾನ್ಯವಾಗಿದೆ. ಈ ವಲಸೆಯಿಂದ ಹಲವು ಸಮಸ್ಯೆಗಳು ಗ್ರಾಮೀಣ ಜನರಿಗೆ ಉಂಟಾಗುತ್ತಿತ್ತು. ಅವುಗಳೆಂದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಸಮಸ್ಯೆ, ಮೂಲ ಕಸುಬುಗಳ ಅವನತಿ, ಸಂಸ್ಕೃತಿಯ ನಾಶ, ಹೀಗೆ ಹತ್ತು ಹಲವು ಸಮಸ್ಯೆಗಳು ಈ ವಲಸೆಯಿಂದಾಗಿ ಉಂಟಾಗುತ್ತಿದ್ದವು. ಈ ಎಲ್ಲ ಸಮಸ್ಯೆಗಳು ಮನಗಂಡು ಕೇಂದ್ರ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಎಂಬ ಯೋಜನೆಯನ್ನು ಜಾರಿಗೆ ತಂದಿತ್ತು, ಈ ಯೋಜನೆಯ ಪ್ರಮುಖ ಗುರಿ ಉದ್ದೇಶಗಳೆಂದರೆ

ಪ್ರತಿಯೊಂದು ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳು ಉದ್ಯೋಗವನ್ನು ಒದಗಿಸುವುದು, ಉದ್ಯೋಗವಕಾಶವನ್ನು ವಿಸ್ತರಿಸುವುದು, ವೇತನಗಳಿಕೆಯ ಸಾಮಾರ್ಥ್ಯವನ್ನು ಉತ್ತಮಗೊಳ್ಳಿಸುವುದು ಮತ್ತು ಕನಿಷ್ಠ ವೇತನದ ಮೇಲೆ ಪರಿಣಾಮ ಬೀರುವುದು, ಗ್ರಾಮೀಣ ಬಡವರ್ಗದ ಜನರ ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸುವುದು, ಮಹಿಳೆಯರಿಗೆ ಮತ್ತು ಪುರಷರಿಬ್ಬರಿಗೂ ಉದ್ಯೋಗ ಒದಗಿಸಬೇಕು ಮತ್ತು ಸಮಾನ ಕೂಲಿ ನೀಡಬೇಕು, ನಗರ ಪ್ರದೇಶಗಳಿಗೆ ಗ್ರಾಮೀಣ ಜನರು ವಲಸೆ ಹೋಗುವುದನ್ನು ತಪ್ಪಿಸಿ, ಅವರಿಗೆ ಸ್ವಂತ ಸ್ಥಳದಲ್ಲಿಯೇ ಉದ್ಯೋಗ ಒದಗಿಸಲಾಗುವುದು, ಗ್ರಾಮೀಣ ಪ್ರದೇಶಗಳಲ್ಲಿ ದೀರ್ಘಾಕಾಲಿಕ ಬಾಳಿಕೆ ಬರುವ ಮತ್ತು ಸಂಪನ್ಮೂಲಗಳನ್ನು ಆಸ್ತಿ ನಿರ್ಮಾಣ ಮಾಡಿಕೊಡುವುದು, ಪರಿಸರ ಸಂರಕ್ಷಣೆಗೆ ಒತ್ತು ನೀಡುವುದು, ಸ್ಥಳೀಯ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳವುದು ಇವೇ ಮೊದಲಾದ ಗುರಿ ಉದ್ದೇಶಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಹೊಂದಿದೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ವಿವರಗಳು**

ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸುವ ಮೂಲ ಉದೇಶವನ್ನು ಇಟ್ಟುಕೊಂಡು ಸ್ಥಾಪನೆಯಾಗಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಪ್ರದೇಶಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಹೆಚ್ಚಿನ ಗಮನವನ್ನು ನೀಡಿದೆ ಅವುಗಳೆಂದರೆ, ಜಲ ಸಂರಕ್ಷಣೆ ಮಳೆ ನೀರು ಕೊಯ್ಲು, ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ), ನೀರಾವರಿ (ಕಾಲುವೆಗಳು, ಕಿರು ಮತ್ತು ಸಣ್ಣ ನೀರಾವರಿ ಕಾಲುವೆಗಳು ಸೇರಿದಂತೆ), ನೀರಾವರಿ ಸೌಲಭ್ಯ, ನೀರಿನ ಮೂಲಗಳ ಪುನಶ್ಚೇತನ, ಜಮೀನಿನ ಅಭಿವೃದ್ಧಿ, ನೆರೆ (ಪ್ರವಾಹ) ನಿಯಂತ್ರಣ ಮತ್ತು ತಡೆಗಟ್ಟುವುದು, ಸರ್ವಋತು ಗ್ರಾಮೀಣ ರಸ್ತೆ ನಿರ್ಮಾಣ.

**ಜಲ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು**

ಅಂತರ್ಜಲ ಮಟ್ಟ ದಿನೇ ದಿನೇ ಕುಸಿಯುತ್ತಾ ಕುಡಿಯುವ ನೀರು ಮತ್ತು ಕೃಷಿ ಚಟುವಟಿಕೆಗಳಿಗೆ ನೀರಿನ ಕೊರತೆ ಭಯಾನಕವಾಗಿ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಜಲಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು ಕಾಮಗಾರಿಗಳಿಗೆ ಮೊದಲು ಆದ್ಯತೆ ನೀಡಬೇಕು. ಕೆರೆ, ಅಣೆಕಟ್ಟೆ ಜಿನುಗಿ ನಿರ್ಮಾಣ ಶಾಲೆಗಳಲ್ಲಿ ಮತ್ತು ಆರ್ಥಿಕವಾಗಿ ಹಿಂದೂಳಿದ ವರ್ಗಗಳ ಮನೆಗಳಲ್ಲಿ ಮಳೆ ನೀರು ಕೊಯ್ಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದು.

**ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ)**

ಶಾಲೆಗಳು, ಕಾಲುವೆ ಆಸು–ಪಾಸು,ಕೆರೆಗಳ ಸುತ್ತ ಖಾಲಿ ಪ್ರದೇಶಗಳು, ಗೋಮಾಳಗಳಲ್ಲಿ ಗಿಡಗಳನ್ನು ನೆಡುವುದು,ಸಾಮಾಜಿಕ ಅರಣ್ಯ ಪ್ರದೇಶಗಳನ್ನು ಅಭಿವೃದ್ಧಿಗೊಳ್ಳಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ನರ್ಸರಿಗಳಲ್ಲಿ ಆರಂಭಿಸುವುದು ಇವೇ ಮೊದಲಾದ ಕಾರ್ಯಗಳಿಂದ ಜನರಲ್ಲಿ ಗಿಡನೆಡುವ ಮನೋಭಾವವನ್ನು ಮೂಡಿಸುವುದು.

**ನೀರಾವರಿ(ಕಾಲುವೆಗಳು, ಕಿರು ಮತ್ತು ಸಣ್ಣ ನೀರಾವರಿ ಕಾಲುವೆಗಳು ಸೇರಿದಂತೆ)**

ಹೊಸದಾಗಿ ನಿರ್ಮಾಣವಾಗುವ ಕಾಲುವೆಗಳು ಮತ್ತು ದುಸ್ಥಿತಿಯಲ್ಲಿರುವ ಕಾಲುವೆಗಳನ್ನು ದುರಸ್ಥಿಗೊಳ್ಳಿಸುವುದು. ಇವುಗಳಿಂದ ನೀರನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಯಶಸ್ಸುಗಳಿಸಬಹುದಾಗಿದೆ.

**ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೊಳ್ಳವ ಕಾಮಗಾರಿಗಳು**

ಭೂ ಅಭಿವೃದ್ಧಿ (ಜಮೀನು ಸಮತಟ್ಟು), ಕುರಿ/ ದನದ ದೊಡ್ಡಿ, ಕೃಷಿ ಹೊಂಡ, ಶೌಚಾಲಯದ ಸುತ್ತ ಗಿಡ ನೆಡುವುದು, ಕೊಳವೆ ಬಾವಿಗಳ ಮರು ಪೂರ್ಣ ಘಟಕ (ವೈಯಕ್ತಿಕ), ಎರೆಹುಳು ಗೊಬ್ಬರ ಗುಂಡಿ, ಹಂದಿಶೆಡ್ಡು, ಕೋಳಿಶೆಡ್ಡು, ರೈತರ ಜಮೀನಿನಲ್ಲಿ ಗಿಡ ನೆಡುವುದು, ಮೀನು ಕೊಳ, ಬಾವಿ ಅಭಿವೃದ್ಧಿ, ರೈತರ ಹಣ, ಆಟದ ಮೈದಾನ, ಸ್ಮಶಾನ ಅಭಿವೃದ್ಧಿ, ಚೆಕ್ ಡ್ಯಾಮ್‌ಗಳ ನಿರ್ಮಾಣ, ಬದು ನಿರ್ಮಾಣ, ಕೊಳವೆ ಬಾವಿಗಳ ಮರುಪೂರ್ಣ ಘಟಕ (ಸಮುದಾಯ), ಕಲ್ಯಾಣಿ ಅಭಿವೃದ್ಧಿ, ರಾಜೀವ್

ಗಾಂಧಿ ಸೇವಾ ಕೇಂದ್ರ, ಗ್ರಾಮೀಣ ಗೋದಾಮುಗಳು, ಕಾಲುವೆ ಅಭಿವೃದ್ಧಿ, ಗ್ರಾಮೀಣ ಉದ್ಯಾನ ನಿರ್ಮಾಣ, ಜಾನುವಾರು ನೀರಿನ ತೊಟ್ಟಿ, ಗೋ ಕಟ್ಟೆ, ಮಣ್ಣಿನ ರಸ್ತೆ, ಸಿಮೆಂಟ್ ರಸ್ತೆ, ರಸ್ತೆ ಬದಿಗಳಲ್ಲಿ ಗಿಡ ನೆಡುವುದು, ಗ್ರಾಮೀಣ ಸಂತೆ, ಸ್ವ–ಸಹಾಯ ಸಂಘಗಳಿಗೆ ಶೆಡ್ಡು ನಿರ್ಮಾಣ, ಸಮುದಾಯ ಕುರಿಶೆಡ್ಡುವ, ವೈಯಕ್ತಿಕ ಶೌಚಾಲಯ, ಶಾಲಾ ಶೌಚಾಲಯ, ಇವೇ ಮೊದಲಾದ ಕಾಮಗಾರಿಗಳನ್ನು ಈ ಯೋಜನೆಯಡಿಯಲ್ಲಿ ಕೈಗೊಳ್ಳಬಹುದಾಗಿದೆ.

## MGNREGA ಯೋಜನೆಯ ಸಫಲತೆಗಳು ಮತ್ತು ವಿಫಲತೆಗಳು

ಈ ಯೋಜನೆಯಡಿ ಹಲವಾರು ಸಫಲತೆಗಳ ನಡುವೆ ಅನೇಕ ವಿಫಲತೆಗಳನ್ನು ಗುರುತಿಸಬಹುದಾಗಿದೆ. ಗ್ರಾಮೀಣಾಭಿವೃದ್ಧಿ, ಗ್ರಾಮೀಣ ಮಟ್ಟದ ಆರ್ಥಿಕ ಮಟ್ಟ ಸುಧಾರಣೆ, ಉದ್ಯೋಗ ಸೃಷ್ಟಿ, ಸಮಾನ ವೇತನ, ವೃದ್ದ ಮತ್ತು ಅಂಗವಿಕಲರಿಗೆ ಉದ್ಯೋಗ ಸೃಷ್ಟಿ ಮತ್ತು ಗುತ್ತಿಗೆದಾರರು ಸಂಪೂರ್ಣ ನಿಷೇಧ ಮುಂತಾದ ಒಳ್ಳೆಯ ಅಂಶಗಳ ಜೊತೆಗೆ ಕೆಲವು ಅನಾನುಕೂಲಗಳನ್ನು ನೋಡಬಹುದಾಗಿದೆ. ಅವುಗಳೆಂದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ರಾಜಕೀಯ ಒತ್ತಡ, ಅಧಿಕಾರಿಗಳ ಬೇಜವಾಬ್ದಾರಿ, ಸಿಬ್ಬಂದಿಗಳ ಕೊರತೆ, ತರಬೇತಿ ಕೊರತೆ ಹಾಗೂ ಕೃಷಿ ಚಟುವಟಿಕೆಗಳ ಮೇಲೆ ನೇರ ಪರಿಣಾಮ ಭೀರಿದೆ.

**ಉಪಸಂಹಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಒಂದು ಉತ್ತಮವಾದ, ಬೃಹತ್ ಮೊತ್ತದ ಯೋಜನೆಯಾಗಿದೆ, ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡ ಪಕ್ಷದಲ್ಲಿ ಖಂಡಿತವಾಗಿಯೂ ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಬಹುದು. ಅದರೆ ಕೆಲವು ತಾಂತ್ರಿಕ ಸಮಸ್ಯೆ, ಆಡಳಿತ ವರ್ಗದವರ ಬೇಜವಾಬ್ದಾರಿಗಳಿಂದ ಈ ಯೋಜನೆಯು ಅಂದುಕೊಂಡಷ್ಟು ಯಶಸ್ಸನ್ನು ಸಾಧಿಸುತ್ತಿಲ್ಲ ಎಂಬುವುದು ಅಕ್ಷರಶ: ಸತ್ಯ ಅದ್ದುದರಿಂದ ಈ ಯೋಜನೆಯನ್ನು ಯಶಸ್ಸುಗೊಳ್ಳಿಸುವುದು ಭಾರತ ಪ್ರಜೆಗಳಾದ ನಮ್ಮೆಲ್ಲರ ಜವಾಬ್ದಾರಿ ಎಂದು ತಿಳಿದು ಗ್ರಾಮೀಣಾಭಿವೃದ್ಧಿ ಸಾಧಿಸುವುದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಗೊರೂರು ರಾಮಸ್ವಾಮಿ ಅಯ್ಯಂಗಾರ್. (2001). ಮಹಾತ್ಮ ಗಾಂಧೀಜಿಯವರ ಅಯ್ದ ಕೃತಿಗಳು ಸಂ–1, ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್.
- ಚಂದ್ರಣ್ಣ ಪಿ.ಎಸ್. (2006). ಗಾಂಧೀಜಿ ಬದುಕು ಬರಹ (ಆಯ್ದ ಭಾಗಗಳು). ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
- ಮೋಹನ್ ಗಾಂಧಿ. (1958). ಆತ್ಮಕಥೆ ಮತ್ತು ಹಿಂದ್ ಸ್ವರಾಜ್, ಚೇತನ್ ಮುದ್ರಣಾಲಯ, ಮೈಸೂರು.
- ಶ್ರೀ ಸಿದ್ಧವನಹಳ್ಳಿ ಕೃಷ್ಣ ಶರ್ಮ. (1969). ಗಾಂಧಿ ಮತ್ತು ಕರ್ನಾಟಕ. ಸಂಯುಕ್ತ ಕರ್ನಾಟಕ ಪ್ರೆಸ್, ಬೆಂಗಳೂರು.